ಮೈಸೂರು ವಿಧಾನಸಭೆ

MYSORE LEGISLATIVE ASSEMBLY

Monday, 27th March 1972.

The House met in the Assembly Chamber, Vidhana Soudha, at One of the Clock.

MADAM SPEAKER (Smt. K. S. NAGARATHNAMMA) in the Chair.

PANEL OF CHAIRMEN

MADAM SPEAKER.—Under Rule 9 of the Rules of Procedure, I nominate the following members to the panel of Chairmen for the current Session:

Sriyuths:

1. G. Rame Gowda
2. T. R. Shamanna
3. Smt. Vijaya Desai
4. Sharanappa

Calling Attention to a Matter of Urgent Public Importance: *re*: Disturbances at Hubli.

MADAM SPEAKER.—The next item is calling attention notice by Sri M. S. Krishnan.

ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).—ನಾನು ಮತ್ತು ನನ್ನ ಸ್ನೇಹಿತರು ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೆವು. ಹುಬ್ಬಳ್ಳಿ ಘಟನೆಗಳ ಬಗ್ಗೆಯೇ ಕಳುಹಿಸಿದ್ದೆವು. ಆದುದರಿಂದ ಅದನ್ನು ತೆಗೆದುಕೊಳ್ಳಬೇಕೆಂದು ನಾನು ಹೇಳುತ್ತೇನೆ.

ಅಧ್ಯಕ್ಷರು :—ಈಗ ಸಭೆಯು ಮುಂದೆ ಬರುವ ಗಮನ ಸೆಳೆಯುವ ಸೂಚನೆಯು ಅದರ ಬಗ್ಗೆಯೇ ಇರುವುದರಿಂದ ಮಾನ್ಯ ಸದಸ್ಯರು ಕ್ವಾರಿಫಿಕೇಷನ್ಸ್ ಕೇಳಬಹುದು.

ಶ್ರೀ ಎಂ. ಎಸ್. ಕೃಷ್ಣನ್.—ಗಮನ ಸೆಳೆಯುವ ಸೂಚನೆಯ ಮೇಲೆ ಕ್ವಾರಿಫಿಕೇಷನ್‌ಗಳನ್ನು ಕೇಳುವುದಕ್ಕೆ ಅವಕಾಶವಿರುತ್ತದೆ, ವಿಷಯದ ಮೇಲೆ ಸಂಪೂರ್ಣವಾಗಿ ಚರ್ಚೆ ಮಾಡುವುದಕ್ಕಾಗುವುದಿಲ್ಲ. ಮಾನ್ಯ ಮುಖ್ಯ ಮಂತ್ರಿಯವರು ಓದುವ ಹೇಳಿಕೆಯನ್ನು ಕೇಳಿಕೊಂಡು ಇರಬೇಕಾಗುತ್ತದೆ.

ಶ್ರೀ ಬಿ. ವಿ. ಕಕ್ಕೇರಾಯ (ಬಂಟವಾಳ).—ಇದು ಬಹಳ ಪ್ರಾಮುಖ್ಯವಾದ ವಿಚಾರ. ಬಹಳ ಜನರು ಜೈಲಿನಲ್ಲಿದ್ದಾರೆ. ಮಂತ್ರಿಗಳು ಒಂದು ಹೇಳಿಕೆಯನ್ನು ಕೊಡುವುದರಿಂದ ಏನೂ ಪ್ರಯೋಜನವಾಗುವುದಿಲ್ಲ.

ಅಧ್ಯಕ್ಷರು.—ತಾವು ಕ್ಲಾರಿಫಿಕೇಷನ್ ಕೇಳಬಹುದು.

ಶ್ರೀ ಎಂ. ಎಸ್. ಕೃಷ್ಣನ್.—ಇದು ಬಹಳ ಪ್ರಾಮುಖ್ಯವಾದ ವಿಚಾರ. ಇದರಲ್ಲಿ ಅನೇಕ ವಿಷಯಗಳು ಅಡಕವಾಗಿರುವುದರಿಂದ ಅದರ ಮೇಲೆ ಚರ್ಚೆ ನಡೆಯಬೇಕು, ಕ್ಲಾರಿಫಿಕೇಷನ್ ಕೇಳಿದರೆ ಸಾಕಾಗುವುದಿಲ್ಲ. ನಿಯಮಗಳ ಪ್ರಕಾರ ಎರಡು ಗಂಟೆ ಮುಂಚೆಯೇ ನಿಲುವಳಿ ಸೂಚನೆಯನ್ನು ಕೊಟ್ಟಿದ್ದೇವೆ.

ಅಧ್ಯಕ್ಷರು.—ನಿಲುವಳಿ ಸೂಚನೆಗೆ ಅನುಮತಿ ಕೊಡುವುದಕ್ಕಾಗುವುದಿಲ್ಲ.

ಶ್ರೀ ಬಿ. ವಿ. ಕಕ್ಕೇರಾಯ.—ಈ ವಿಷಯವನ್ನು ಚರ್ಚೆ ಮಾಡುವುದಕ್ಕೆ ಅವಕಾಶ ಕೊಟ್ಟರೆ...

Sri D. DEVARAJ URS (Chief Minister).—When the Speaker has given a ruling, let us not discuss about it. Now that the calling attention motion is before the House, I may also give some clarifications after my statement.

ನಿಲುವಳಿ ಸೂಚನೆಯ ಬಗ್ಗೆ ರೂಲಿಂಗ್ ಕೊಟ್ಟಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್.—ರೂಲಿಂಗ್ ಕೊಟ್ಟಿದ್ದರೆ ನಾನು ಏನೂ ಹೇಳುವುದಿಲ್ಲ.

ಅಧ್ಯಕ್ಷರು.—ನಿಲುವಳಿ ಸೂಚನೆಗೆ ಅವಕಾಶ ಕೊಡುವುದಕ್ಕಾಗುವುದಿಲ್ಲ. ದಯವಿಟ್ಟು ಕುಳಿತುಕೊಳ್ಳಿ.

Sri T. R. SHAMANNA.—Madam, I call the attention of the Hon. Chief Minister to a matter of urgent public importance, namely. violent disturbances and clashes at Hubli and police excesses in dealing with the situation.

Sri D. DEVARAJ URS (Chief Minister).—Madam, The Anjuman-E-Islam has started construction of shops on the Idiga Maidan at Hubli after obtaining sanction. A section of the people were opposed to any construction coming up, but they failed to prevent the construction by legal means. A resolution to supersede the earlier decision of the Corporation in regard to construction was moved in the Hubli-Dharwar Corporation by some of the Corporators. The subject was postponed from time to time in the Corporation and came up for discussion on 19th February 1972. On that day students took out a procession and represented to the Commissioner that the construction should be stayed. In the Corporation meeting, on the same issue, two sections of the Corporators clashed. The situation was brought under control by intervention of the Police.

The Hubli-Dharwar Municipal Corporation met again on 22nd February 1972. Heavy Police bundobust was arranged in the Corporation and in the City and the day passed off without any incident.

A further meeting of the Corporation was held on 17th March 1972. At about 18-00 hours when the meeting was in progress, two groups of people collected in front of the office. These two groups raised slogans and counter-slogans and pelting of stones also started. The police made a lathi-charge and dispersed this unlawful assembly. But they moved out from this area and indulged in stone throwing in the city.

Prohibitory order under section 35 of the Mysore Police Act was promulgated at 18-45 hours effective for seven days from 17th March 1972, and this has further been extended upto 31st March 1972. At about 19-00 hours on that day (17th March 1972) one Shri Srikant Waman Chipkar was stabbed in the abdomen by an unknown person. He was immediately admitted into the K.M.C. Hospital. A few other minor incidents took place on that day in which two persons were injured.

The situation was completely under control upto 20th March 1972 on which day the condition of Shri Srikant Waman Chipkar deteriorated and gave rise to anxiety.

On 21st March 1972 at 4-30 hours Srikant Waman Chipkar expired. Immediately, apprehending trouble, the police vigilance and bundhobust were further stepped up. The District Magistrate and the Superintendent of Police attempted to persuade the relatives to have a quiet funeral. But in the meanwhile shops were closed in the city as a mark of respect for the deceased.

At about 12-00 hours on 21st March 1972, groups started colleeting in diff.rent parts of the city and pelt.ng stones. Police dispersed these mobs by lathi-charge. A mob near Pender Oni attempted to set fire to the mosque. The Police and the Fire Force reached the spot and promptly extinguished the fire and minimised the damage to the mosque. There was an attempt to set fire to the house of one Dr. Jitturi and this was also foiled by the intervention of the police. Near Durgada Bail the mob set fire to a shop in the Gandhi Bazaar. The fire spread to other shops damaging 5 of them completely and 4 partially. Two fruit shops were also damaged. The mob collected near Idiga maidan damaged three fruit stalls by setting fire.

At about 14·30 hours the situation was coming under control Then the funeral procession of Srikant Waman Chipkar started from the K.M.C. Hospital. The cremation took place at Goponkop at 16-30 hours. Some other persons returning from the funeral started pelting stones at the house of Shri Mohisin. The police picket posted near the house dispersed the crowd without allowing much damage to be caused. Another group of persons, mostly students, met near the house of Shri Kittur in Vidyanagar area and started pelting stones. They set fire to his car parked in front of his house, but the police arrived at the spot and dispersed the crowd. In the various incidents in the city 9. persons from the public and 13 policemen received injuries. Police have registered cases in connection with the incidents which are under investigation.

The District Magistrate imposed curfew from 7-00 P.M. to 6-00 A.M. on the nights of 21st March 1972 and 22nd March 1972. The curfew was strictly enforced throughout the city and there have been no untoward incidents thereafter.

Sri K. H. Patil, Minister for Agriculture and Forest went round the affected areas on 21st March 1972 and at his instance a peace

(SRI D. DEVARAJ URS)

committee was constituted with the Mayor of Hubli-Dharwar Corporation as the President. The District Integration Council met on 23rd March 1972 and passed a resolution supporting the efforts of the peace Committee. Members of the peace Committee went round the City to bring the situation to normally.

To day morning also I have received information from Hubli that things are quite normal.

ಶ್ರೀ ಟಿ. ಆರ್. ಶಾಮಣ್ಣ (ಕೋಚೆ).—ಸ್ವಾಮಿ, ಮುಖ್ಯಮಂತ್ರಿಗಳು ಇಲ್ಲಿ ಕೊಟ್ಟಿರುವ ಹೇಳಿಕೆಗೂ ಮತ್ತು ಅಲ್ಲಿ ನಡೆದಿರತಕ್ಕ ವಾಸ್ತವಾಂಶಗಳಿಗೂ ಬಹಳ ದೂರ ಇದೆ ಎಂದು ನಾನು ತಿಳಿದುಕೊಂಡಿದ್ದೇನೆ. ಅಲ್ಲಿ ಏನು ಗಲಭೆಗಳು ಆದವು ಅದು ಎರೆಕ್ಷನ್ ಜೈಂಟಲ್ಲಿ ಆದದ್ದು ಎಂತ ತಿಳಿದುಬರುತ್ತದೆ ಮತ್ತು ಇದಕ್ಕೂ ಅದಕ್ಕೂ ಸಂಬಂಧ ಇದೆ ಎಂದು ಹೇಳುತ್ತಾರೆ, ಇದು ನಿಜವೇ ?

ಎರಡನೆಯದಾಗಿ ಚುನಾವಣೆ ಸಮಯದಲ್ಲಿ ಹೆಚ್ಚಾಗಿ ಜಾತೀಯ ಗಲಭೆ ಮತ್ತು ಕುಡಿತದ ಪ್ರಭಾವ ಹೆಚ್ಚಾಗಿ ಅನೇಕ ಕಡೆಗಳಲ್ಲಿ ಎರೆಕ್ಷನ್‌ಗಳು ನಡೆದಿವೆ ಎಂದು ಗೊತ್ತಾಗುತ್ತದೆ. ಇದು ಸರಕಾರದ ಗಮನಕ್ಕೆ ಬಂದಿದೆಯೇ ? ಇದೂ ಅಲ್ಲದೆ ನಮ್ಮ ಕಾನ್ಸ್‌ಟಿಟ್ಯುಯೆನ್‌ಸೀಯಲ್ಲೂ ಕೂಡ ದಿನಬೆಳಗಾದರೆ ಹೊಡೆದಾಟಗಳು ಆಗುತ್ತಲೇ ಇರುತ್ತವೆ, ಇದನ್ನು ತಪ್ಪಿಸುವುದಕ್ಕೆ ಏನಾದರು ಕ್ರಮಗಳನ್ನು ಕೈಗೊಳ್ಳುತ್ತೀರಾ ?

ಶ್ರೀ ಡಿ. ದೇವರಾಜ ಅರಸ್.—ಸ್ವಾಮಿ, ನಿಮ್ಮ ಕಾನ್ಸ್‌ಟಿಟ್ಯುಯೆನ್ಸಿಗೂ ಇಲ್ಲಿ ಬಂದಿರುವ ವಿಚಾರಕ್ಕೂ ಏನು ಸಂಬಂಧವೂ ಇಲ್ಲ. ಅದು ಬೇರೆ ವಿಚಾರ, ಅದರ ಬಗ್ಗೆ ಬೇರೆ ಸಂದರ್ಭದಲ್ಲಿ ತಮಗೆ ಮಾತನಾಡುವುದಕ್ಕೆ ಅವಕಾಶ ಇದೆ.

ಎರಡನೆ ಪ್ರಶ್ನೆ ಚುನಾವಣೆ ಕಾಲದಲ್ಲಿ ಕುಡಿತ ವಗೈರೆಗಳಿಗೆ ಹೆಚ್ಚು ಜನ ಸಿಕ್ಕಿ ಕಷ್ಟಗಳಿಗೆ ಸಿಕ್ಕಿದರು ಎಂದು ಇಲ್ಲಿ ಹೇಳುವುದಕ್ಕೆ ಬರುವುದಿಲ್ಲ. ಈಗಾಗಲೇ ನಾವೆಲ್ಲಾ ಚುನಾವಣೆಗಳಲ್ಲಿ ಗೆದ್ದು ಬಂದಿದ್ದೇವೆ, ಇದರ ಬಗ್ಗೆ ತಮಗೆ ಹೆಚ್ಚು ವಿಚಾರಗಳು ಗೊತ್ತಿದ್ದರೆ ಅದರ ಬಗ್ಗೆ ಬೇರೆ ಸಂದರ್ಭದಲ್ಲಿ ಇಲ್ಲಿ ಚರ್ಚೆ ಮಾಡಬಹುದು, ಆಗ ಇದರ ಅನುಭವಗಳನ್ನು ತಿಳಿದುಕೊಳ್ಳುವುದಕ್ಕೆ ಪ್ರಯತ್ನ ಮಾಡೋಣ. ಇಲ್ಲಿ ಹುಬ್ಬಳಿ ಧಾರವಾಡ ಕಾರ್ಪೊರೇಷನ್‌ನಲ್ಲಿ ನಡೆದ ಘಟನೆಗಳಿಗೂ ಕಾರ್ಪೊರೇಷನ್‌ನಲ್ಲಿ ನಡೆದ ಎರೆಕ್ಷನ್‌ಗಳಿಗೂ ಸಂಬಂಧ ಇದೆ ಎಂದು ಏನು ತಾವು ಅನುಮಾನ ಮಾಡುತ್ತಿದ್ದೀರೋ ಅದು ಸರಿಯಲ್ಲ ಮತ್ತು ಇದಕ್ಕೂ ಅವಕ್ಕೂ ಯಾವ ಸಂಬಂಧವೂ ಇಲ್ಲ, ನಾನು ಮೊದಲೇ ಹೇಳಿದಂತೆ ಈದಿಗಾದ ಹತ್ತಿರ ರೈಸನ್ಸ್ ಪಡೆದು ಷಾಪುಗಳನ್ನು ಕಟ್ಟಬೇಕೆಂದು ಪ್ರಯತ್ನ ಮಾಡಿದಾಗ ಜನರಲ್ಲಿ ಒಂದು ರೀತಿಯಾದ ಘರ್ಷಣೆಗಳಿಗೆ ಅವಕಾಶವಾಯಿತು. ಇದರ ವಿಚಾರಗಳನ್ನೆಲ್ಲಾ ನನ್ನ ಹೇಳಿಕೆಯಲ್ಲಿ ಕೊಟ್ಟಿದ್ದೇನೆ.

Sri M. B. RAMASWAMY (Anekal).—May I know the total loss suffered and the measures taken to protect the public properties ?

Sri D. DEVARAJ URS .—The total damage is estimated to be of the order of Rs. 67,000. The measures that we propose to take is to give some compensation, if possible.

Sri B. B. SAYANAK (Belgaum).—may I know whether they have secured the permission from the Town Planning Officer to construct the building and whether they have got permission and whether they have credited any fees ?

Sri D. DEVARAJ URS.—I am not in a position to give details. I know that they were legally competent and legally, permitted to proceed with the construction.

ಶ್ರೀ ಎಂ. ಎಸ್. ಕೃಷ್ಣನ್.—ಸ್ವಾಮಿ, 14-1-1972 ರಂದು ಹುಬ್ಬಳ್ಳಿ ಕಾರ್ಪೊರೇಷನ್ ನವರು ಈದಿಗಾ ಮೈದಾನದಲ್ಲಿ ಶ್ರೀ ಅಂಜುಮಾನ್ ಎ. ಇಸ್ಲಾಂ ಸಂಸ್ಥೆಯವರಿಗೆ ಆಂಗಡಿಯನ್ನು ಕಟ್ಟಲು ಅನುಮತಿಯನ್ನು ನೀಡಿದ್ದರೂ ಸಹ, ಅವರಿಗೆ ಅನುಮತಿಯನ್ನು ಕೊಡಕೂಡದು ಎಂದು ಜನಸಂಘದ ಮಾನ್ಯ ಸದಸ್ಯರೊಬ್ಬರು ಕಾರ್ಪೊರೇಷನ್ ಸಭೆಯಲ್ಲಿ ಒಂದು ಸೂಚನೆಯನ್ನು ತಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಮತ್ತು ಅಷ್ಟು ಮಾತ್ರವಲ್ಲದೆ ಜನಸಂಘದವರು ಕೆಲವರು ಮೇಲಿಂದಮೇಲೆ ಚಿತಾವಣೆ ಮಾಡಿ ಕೋಮುವಾರು ಗಲಭೆಯನ್ನು ಎಬ್ಬಿಸಿ ಗರಾಚೆ ಮಾಡಿದ್ದು ತಮ್ಮ ಗಮನಕ್ಕೆ ಬಂದಿದೆಯೇ ? ಅದು ತಮ್ಮ ಗಮನಕ್ಕೆ ಬಂದಿದ್ದರೆ ಅದಕ್ಕೆ ಏನು ಬಂದೋಬಸ್ತು ಮಾಡಬೇಕೋ ಆದನ್ನು ಮಾಡಿದ್ದೀರಾ ಹೇಗೆ ?

ಶ್ರೀ ಡಿ. ದೇವರಾಜ ಅರಸ್ .—ನಾನು ತಮ್ಮ ಮುಂದಿಟ್ಟ ವರದಿಯಲ್ಲಿ ಕಾರ್ಪೊರೇಟರು ಗಳಲ್ಲಿ ಮೊದಲು ಜಗಳ ಪ್ರಾರಂಭವಾಯಿತು ಎಂದು ಹೇಳಿದೆ. ಆದರೆ ಆ ಜಗಳವನ್ನು ಪ್ರಾರಂಭ ಮಾಡಿದ ಕಾರ್ಪೊರೇಟರು ಯಾರು, ಅವರು ಜನಸಂಘದವರೇ ಆಥವಾ ಬೇರೆ ಪಕ್ಷದವರೇ ಎನ್ನುವುದು ನಮಗೆ ತಿಳಿದಿಲ್ಲ. ಈಗ ಮಾನ್ಯ ಸದಸ್ಯರು ಹೇಳಿದಂತಹ ಮಾತು ಗಮನಿಸಿ ಬೇಕಾದಂತಹ ವಿಚಾರ. ಹಿಂದೆಯೇ ಈ ಬಗ್ಗೆ ಕ್ರಮವನ್ನು ತೆಗೆದುಕೊಳ್ಳಬೇಕಾಗಿತ್ತು ಎನ್ನುವ ಬಗ್ಗೆ ಈಗ ಏನು ಹೇಳುವುದಕ್ಕೂ ಬರುವುದಿಲ್ಲ. ಈ ಸಂಬಂಧದಲ್ಲಿ ಕೆಲವು ಜನರನ್ನು ಅರೆಸ್ಟ್ ಮಾಡಿರತಕ್ಕದ್ದು ಸಾರ್ವಜನಿಕರ ಗಮನಕ್ಕೆ ಬಂದಿದೆ. ಅದನ್ನು ಈ ಮಾನ್ಯ ಸಭೆಯ ಗಮನಕ್ಕೂ ತರುತ್ತೇನೆ. ಈಗ ಅರೆಸ್ಟ್ ಮಾಡಿರುವವರಲ್ಲಿ ಜನಸಂಘಕ್ಕೂ ಸೇರಿದವರು ಇದ್ದಾರೆ, ಕಾಂಗ್ರೆಸ್ (ಆರ್) ಪಕ್ಷಕ್ಕೆ ಸೇರಿದವರೂ ಇದ್ದಾರೆ. ಕಾರ್ಪೊರೇಟರ್ಸ್ ಇದ್ದಾರೆ, ಕಾಂಗ್ರೆಸ್ (ಓ) ಪಕ್ಷಕ್ಕೆ ಸೇರಿದವರೂ ಇದ್ದಾರೆ.

ಶ್ರೀ ಬಿ. ವಿ. ಕಕ್ಕಿರಾಯ (ಬಂಟವಾಳ) —ಕಾನೂನು ಪ್ರಕಾರ ಆ ಮೈದಾನದಲ್ಲಿ ಬಿಲ್ಡಿಂಗ್ ಕಟ್ಟುವುದಕ್ಕೆ ಕಾರ್ಪೊರೇಷನ್‌ನವರು ಅನುಮತಿಯನ್ನು ಕೊಟ್ಟಿದ್ದಾರೆ. ಅದನ್ನು ಕಟ್ಟಕೂಡದು ಎಂದು ಕೆಲವರು ಗಲಾಟೆ ಮಾಡಿದ್ದಾರೆ. ಆ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳಾದ ಶ್ರೀ ಕೆ. ಎಚ್. ಪಾಟೀರ್‌ರು ಹುಬ್ಬಳ್ಳಿಗೆ ಹೋಗಿ ಶಾಂತಿ ಸಮಿತಿಯನ್ನು ರಚನೆ ಮಾಡಿದ ನಂತರ ಆ ಮೈದಾನದಲ್ಲಿ ಕಟ್ಟುತ್ತಿದ್ದ ಕಟ್ಟಡವನ್ನು ಸ್ವಲ್ಪಕಾಲ ನಿಲ್ಲಿಸಬೇಕೆಂದು ಹೇಳಿದ್ದು ತಮ್ಮ ಗಮನಕ್ಕೆ ಬಂದಿದೆಯೇ ? ಈಗ ಕಾಂಗ್ರೆಸ್ (ಆರ್), ಕಾಂಗ್ರೆಸ್ (ಓ) ಮತ್ತು ಕಮ್ಯುನಿಸ್ಟ್ ಪಕ್ಷದವರು ಇತ್ಯಾದಿ ಪಕ್ಷದವರನ್ನು ಏನು ಜೈಲಿನಲ್ಲಿ ಹಾಕಿದ್ದೀರಿ ಅವರನ್ನು ಬೇಗ ಬಿಡುಗಡೆ ಮಾಡುವ ಯೋಚನೆ ಸರ್ಕಾರಕ್ಕೆ ಇದೆಯೇ ?

ಶ್ರೀ ಡಿ. ದೇವರಾಜ ಅರಸ್.—ಯಾರಿಗೇ ಆಗಲೀ ಕಾನೂನು ಪ್ರಕಾರ ಇರತಕ್ಕಂಥಾ ಹಕ್ಕು ಬಾಧ್ಯತೆಗಳನ್ನು ಪಡೆಯುವುದಕ್ಕೆ ಸರ್ಕಾರ ಮತ್ತು ಕೋರ್ಟು ರಕ್ಷಣೆ ಕೊಡಲೇಬೇಕಾಗುತ್ತದೆ. ಕಾನೂನು ಬದ್ಧವಾಗಿ ಇರತಕ್ಕಂಥ ರಕ್ಷಣೆಯನ್ನು ಮೊಟಕು ಮಾಡುವುದಿಲ್ಲ. ಮಾನ್ಯ ಮಂತ್ರಿಗಳಾದ ಆ ಶ್ರೀ ಕೆ. ಎಚ್. ಪಾಟೀಲರು ಅಂದಿನ ಪರಿಸ್ಥಿತಿ ನೋಡಿ ಆ ರೀತಿ ಸಲಹೆ ಮಾಡಿರಬಹುದು. ಆದರಲ್ಲಿ ತಪ್ಪೇನು ಇಲ್ಲ. ಈಗ ಅರೆಸ್ಟ್ ಮಾಡಿರುವವರನ್ನು ಬಿಡುವ ವಿಚಾರದಲ್ಲಿ ಹೇಳುವುದಾದರೆ ಆ ಕೇಸು ಈಗಾಗಲೇ ನೇರವಾಗಿ ಕೋರ್ಟಿಗೆ ಹೋಗಿದೆ. ಅದು ಕೋರ್ಟಿನಲ್ಲಿ ಏನು ಆಗುತ್ತದೆಯೋ ನೋಡೋಣ.

ಶ್ರೀ ಎಸ್. ಬಂಗಾರಪ್ಪ (ಸೊರಬ).—ಆ ಗಲಭೆಯಲ್ಲಿ ಯಾರು ಸತ್ತಿದ್ದಾರೆ, ಯಾರು ಯಾರು ನಷ್ಟ ಮತ್ತು ತೊಂದರೆಗೊಳಗಾಗಿದ್ದಾರೆ ಅವರೆಲ್ಲರಿಗೂ ಎಷ್ಟೆಷ್ಟು ಪರಿಹಾರವನ್ನು ಕೊಡಬೇಕೆಂದು ನಿಗದಿಮಾಡಿದ್ದೀರಿ ?

ಶ್ರೀ ಡಿ. ದೇವರಾಜ ಅರಸ್.—ಈಗ ಆ ವಿವರ ನನ್ನ ಮುಂದೆ ಇಲ್ಲ. ನೂಕ್ತ ಕಂಡ ರೀತಿಯಲ್ಲಿ ಕಾನೂನು ಪ್ರಕಾರ ಅವರಿಗೆ ಏನು ಪರಿಹಾರ ಕೋಡಬೇಕೊ ಅದನ್ನು ಕೊಡೋಣ.

ಈಗ ತಾನೆ ಒಂದು ಇನ್‌ಫರ್‌ಮೇಷನ್ ಬಂದಿದೆ. ಅದನ್ನು ಈ ಮಾನ್ಯ ಸಭೆಯ ಗಮನಕ್ಕೆ ತರುತ್ತೇನೆ. ಅದು ಏನೆಂದರೆ ಆ ಸಂಭಂಧದಲ್ಲಿ 9 ಜನರನ್ನು ಪ್ಯೂರಿಟಿ ಸಾಲ್ವೆನ್ಸಿ ಸರ್ಟಿಫೀಕೆಟ್ ತೆಗೆದುಕೊಂಡು ಮತ್ತು ಅವರಿಂದ 5 ಸಾವಿರ ರೂಪಾಯಿಗಳ ಬಾಂಡ್ ತೆಗೆದುಕೊಂಡು ಕೋರ್ಟು ಬೈಲ್ ಮೇಲೆ ರಿಲೀಜ್ ಮಾಡಿದೆ. ಉಳಿದವರು ಇನ್ನೂ ಬೈಲ್‌ಗೆ ಅಪ್ಲೈ ಮಾಡಿಕೊಂಡಿಲ್ಲ.

ಶ್ರೀ ಪಿ. ಎನ್. ಪಾಟೀಲ್ (ಹುಮ್ನಾಬಾದ್).—ಸ್ವಾಮಿ ಹುಬ್ಬಳ್ಳಿ ಗಲಭೆ ವಿಷಯದಲ್ಲಿ ನಮಗೆ ಒಂದು ವಿಷಯ ಕಂಡುಬರುತ್ತದೆ. ಗಲಭೆಗೆ ಈ ಸಂಬಂಧಪಟ್ಟ ಹಾಗೆ ಕೆಲವು ಹಿನ್ನೆಲೆ ಇದ ಮತ್ತು ಕೆಲವು ದುಷ್ಟ ಶಕ್ತಿಗಳು ಇದರ ಹಿಂದೆ ಇವೆ ಎಂದು ನಮಗೆ ಅರ್ಥವಾಗುತ್ತದೆ. ಮಾನ್ಯ

(ಶ್ರೀ ಎ. ಎನ್. ಪಾಟೀಲ್)

ಮುಖ್ಯಮಂತ್ರಿಗಳು ಈ ಸಭೆಯ ಸದಸ್ಯರನ್ನು ಕಾನ್‌ಫಿಡೆನ್ಸಿಗೆ ತೆಗೆದುಕೊಂಡು ಆ ಗಲಭೆಗೆ ಕಾರಣರಾದ ದುಷ್ಟ ಶಕ್ತಿಗಳು ಯಾರು ಯಾರು ಇದ್ದಾರೆಯೋ ಅವರ ಮೇಲೆ ಕಾಯಿದೆ ಪ್ರಕಾರ ಕ್ರಮವನ್ನು ತೆಗೆದುಕೊಳ್ಳಬೇಕು. ಹಾಗೆಯೇ ಗುಲ್ಬರ್ಗಾದಲ್ಲಿ ಸುಮಾರು 200 ಮನೆಗಳನ್ನು ಸುಟ್ಟುಹಾಕಿದ್ದಾರೆ. ಈ ವಿಚಾರ ಮಾನ್ಯ ಮುಖ್ಯ ಮಂತ್ರಿಗಳಿಗೆ ಗೊತ್ತಿದೆ. ಜಾತೀಯತೆ ಕೋಮು ವಾರು ಭಾವನೆಯಿಂದ ಯಾವ ದುಷ್ಟಶಕ್ತಿಗಳು ಈ ಗಲಭೆಯ ಹಿನ್ನಲೆಯಲ್ಲಿ ಕೆಲಸ ಮಾಡಿದ್ದಾರೆ. ಆ ದುಷ್ಟ ಶಕ್ತಿಗಳನ್ನು ಬೇರುಸಹಿತ ಕಿತ್ತುಹಾಕಬೇಕು. ಈ ಬಗ್ಗೆ ಒಂದು ಜುಡಿಸಿಯಲ್ ಎನ್‌ಕ್ವೈರಿ ಮಾಡಬೇಕು. ಮತ್ತು ಮೈನಾರಿಟಿ ಜನಗಳಿಗೆ ಪ್ರೊಟೆಕ್ಷನ್ ಕೊಡಬೇಕು. ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಡಿ. ದೇವರಾಜ ಅರಸ್.—ಈಗ ಮಾನ್ಯ ಸದಸ್ಯರು ಮೈನಾರಿಟಿ ಜನಗಳಿಗೆ ರಕ್ಷಣೆ ಕೊಡಬೇಕು ಎಂದು ಏನು ಹೇಳಿದರು ಅದನ್ನು ನಾನು ಒಪ್ಪುತ್ತೇನೆ. ಆ ಬಗ್ಗೆ ಸರ್ಕಾರ ಯಾವ ಕಾರಣದಿಂದಲೂ ಹಿಂದೆಗೆಯುವುದಿಲ್ಲ. ನ್ಯಾಯವಾಗಿ ಯಾರಿಗೆ ರಕ್ಷಣೆ ದೊರೆಯಬೇಕೋ ಅವರಿಗೆ ಅದನ್ನು ದೊರಕಿಸುತ್ತೇವೆ. ಮುಂದೆ ಇಂಥಾ ಗಲಭೆಗಳು ಆಗಿದ್ದಾಗ್ಯೆ ಉದ್ಭವವಾಗಬಹುದು. ಇದಕ್ಕೆ ಕೆಲವು ಶಕ್ತಿಗಳ ಹಿನ್ನೆಲೆ ಇದೆ. ಇದರ ಬಗ್ಗೆ ಸರ್ಕಾರ ಹೆಚ್ಚು ಕಣ್ಣಿಟ್ಟು ನೋಡಬೇಕಾದ ಅಗತ್ಯ ಇದೆ. ಎಲ್ಲೆಲ್ಲಿ ಗಲಭೆಗಳನ್ನು ಮಾಡತಕ್ಕ ಕೆಲವು ಜನರು ಇದ್ದಾರೆ, ಮತ್ತು ಗಲಭೆಯನ್ನು ಮಾಡುವುದಕ್ಕೆ ಪ್ರಚೋದನೆ ಮಾಡುತ್ತಾರೆ ಅಂಥವರನ್ನು ಸರ್ಕಾರ ಕಣ್ಣಿಟ್ಟು ನೋಡಬೇಕಾಗುತ್ತದೆ. Invariably these people will kindle up such riots. We will take care to see that these people are located from now on and they are dealt with suitably even before they start making mischief, whether it is in Hubli or elsewhere.

In this behalf I may also state that the Government will welcome any suggestions from the hon. members to help the Government to locate such anti-social and communal elements.

With regard to judicial enquiries I don't think the House expects the Government to make a general statement that everywhere we will hold judicial enquiries. It all depends upon the situation and the volume of mischief of the riots. As and when such things happen. Government will see in the light of the circumstances whether an enquiry is necessary or not and we will take a decision accordingly.

1-30 P.M.

ಶ್ರೀ ಎಂ. ಎಸ್. ಕೃಷ್ಣನ್.—ಹುಬ್ಬಳ್ಳಿ ಗಲಾಟೆಯ ಬಗ್ಗೆಯಾದರೂ ಕೂಡ ನ್ಯಾಯಾಂಗ ತನಿಖೆಗೆ ಏರ್ಪಾಡು ಮಾಡಬಹುದಲ್ಲಾ ?

Sri D. DEVARAJ URS.—Now, there is no need because the Government is confident of effectively dealing with this matter.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜಪೇಟೆ).—ಮಾನ್ಯ ಮುಖ್ಯಮಂತ್ರಿಗಳು.....

ಅಧ್ಯಕ್ಷರು.—ತಾವು ಕುಳಿತುಕೊಳ್ಳಬೇಕು. ಕಾಲ್ ಅಟೆನ್‌ಷನ್ ನೋಟೀಸ್ ಕಳುಹಿಸಿದವರಿಗೆ ನಾನು ಪ್ರಶ್ನೆ ಕೇಳಲು ಅನುಮತಿ ಕೊಟ್ಟಿದ್ದೇನೆ. ಈಗ ಮುಂದಿನ ವಿಷಯಕ್ಕೆ ಹೋಗಬೇಕಾಗಿದೆ

ಶ್ರೀ ವಾಟಾಳ್ ನಾಗರಾಜ್.—ನಾನು ಹತ್ತು ನಲ ನಿಂತೆ. ತಾವು ನನಗೆ ಪ್ರಶ್ನೆ ಕೇಳಲು ಅನುಮತಿ ಕೊಡುವುದಾಗಿ ಹೇಳಿದಿರಿ, ಅದರ ಪ್ರಕಾರ ಈಗ ಕೊಡಬೇಕು.

ಅಧ್ಯಕ್ಷರು.—ರಾಜ್ಯಪಾಲರ ಭಾಷಣದ ಚರ್ಚೆ ಸಮಯದಲ್ಲಿ ತಾವು ಈ ವಿಚಾರವನ್ನು ಪ್ರಸ್ತಾಪ ಮಾಡಬಹುದು. ಈಗ ಕುಳಿತುಕೊಳ್ಳಬೇಕು. ರೂಲ್‌ಗೆ ವಿರುದ್ಧ ಹೋಗಬೇಡಿ.

ಶ್ರೀ ವಾಟಾಳ್ ನಾಗರಾಜ್.—ನಾನು ರೂಲ್ಸ್‌ಗೆ ವಿರುದ್ಧ ಹೇಳುತ್ತಿಲ್ಲ. ಒಂದು ಪ್ರಶ್ನೆ ಮಾತ್ರ ಕೇಳಲು ನನಗೆ ಅನುಮತಿ ಕೊಡಬೇಕು.

ಅಧ್ಯಕ್ಷರು.—ಅದನ್ನು ಕೇಳಿ.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಮುಖ್ಯಮಂತ್ರಿಗಳು ಹುಬ್ಬಳ್ಳಿ ಗಲಭೆ ಬಗ್ಗೆ ಒಂದು ಹೇಳಿಕೆಯನ್ನು ಈ ಸಭೆಯಲ್ಲಿ ನೀಡಿದ್ದಾರೆ. ಗಲಾಟೆ ಯಾರಿಂದಲೇ ಪ್ರಾರಂಭವಾಗಿರಲಿ, ಆದರೆ ಇದೇ ಸಂದರ್ಭದಲ್ಲಿ ಚುನಾವಣೆ ಪ್ರಾರಂಭವಾಗಿದೆ. ಈ ದಿನ ನಾಮಿನೇಷನ್ ಫೈಲ್ ಮಾಡುವುದಕ್ಕೆ ಕೊನೆ ದಿನ ಇರಬಹುದೆಂದು ಕಾಣುತ್ತದೆ. ಇವತ್ತಿನ ದಿವಸ ಕರ್ಫ್ಯೂ ಆರ್ಡರನ್ನು ಹುಬ್ಬಳ್ಳಿಯಲ್ಲಿ ವಿಧಿಸಿರುವುದರಿಂದ ಜನರು ಹೊರಗಡೆ ಬರುವಂತಿಲ್ಲ. ಜನರು ಭಯದಿಂದ ಕೂಡಿದ್ದಾರೆ. ಇಂತಹ ಸಂದರ್ಭದಲ್ಲಿ ಚುನಾವಣೆ ನಡೆಸುವುದು ಯೋಗ್ಯವಲ್ಲ. ಆದಕಾರಣ ಚುನಾವಣೆಯನ್ನು ಮುಂದೂಡುವ ಪ್ರಶ್ನೆಯನ್ನು ಏಕೆ ಕೈಕೊಳ್ಳಬಾರದೆಂದು ನಾನು ಕಳಕಳಿಯಿಂದ ಪ್ರಾರ್ಥಿಸುತ್ತೇನೆ ?

ಶ್ರೀ ಡಿ. ದೇವರಾಜ ಅರಸ್.—ಚುನಾವಣೆಯನ್ನು ಮುಂದೂಡಬೇಕಾದ ಪರಿಸ್ಥಿತಿ ಇಲ್ಲ. ಮತ್ತೆ ಗಲಭೆಯಾಗದಂತೆ ಪರಿಸ್ಥಿತಿಯನ್ನು ಹತೋಟಿಯಲ್ಲಿ ಇಟ್ಟುಕೊಳ್ಳಲಾಗಿದೆ. ಚುನಾವಣೆಯನ್ನು ಏನಾದರೂ ಮುಂದೂಡಿದರೆ ಸರ್ಕಾರದವರು ಹೆದರಿಕೊಂಡು ಚುನಾವಣೆಯನ್ನು ಮುಂದೂಡಿದರು ಎಂದು ತಾವು ಹೇಳಬಹುದು. ಈಗ ನಾರ್ಮಲ್ ಆಗಿ ನಡೆಯುವ ಕೆಲಸಗಳು ನಡೆಯುತ್ತಿವೆ. ಎಲ್ಲ ಹತೋಟಿಯಲ್ಲಿದೆ. ಈಗಾಗಲೇ ಕೆಲವು ಜನರು ಬೇಲ್ ಮೇಲೆ ಬಿಡಿಸಿಕೊಂಡಿದ್ದಾರೆ. ಜೈಲ್‌ನಲ್ಲಿ ಇದ್ದುಕೊಂಡೇ ಕೆಲವರು ಚುನಾವಣೆಯಲ್ಲಿ ಸ್ಪರ್ಧೆ ಮಾಡಬಹುದೆಂದು ಕಾಣುತ್ತದೆ.

MADAM SPEAKER.—I request the hon. member Sri Vatal Nagaraj not to take this as a precedent.

Papers laid on the Table

Sri D. DEVARAJ URS (Chief Minister).—I beg to lay the Accounts of the Mysore State Electricity Board for the year 1969-70 and Audit Report thereon as required under Section 69(5) of the Electricity (Supply) Act, 1948.

Sri S. M. KRISHNA (Minister for Commerce and Industry).—On behalf of the Minister for Municipal Administration, I beg to lay :—

> "Notification No. HMA 6 TMO 71 dated 27th May 1971 regarding Chitradurga Town Municipal Council—continuation of supersession for a further period of two years from 1st July 1971",

as required under Section 316 (5) of the Mysore Municipalities Act, 1964.

Sri AZIZ SAIT (Minister for Labour, Transport and Wakfs)—I beg to lay :

> "Administration Report of the Mysore State Road Transport Corporation for the year 1969-70",

as required under Section 35(2) of the Road Transport Corporation Act, 1950 (Central Act No. 64 of 1950).